# ಮಕ್ಕಳಿಗಾಗಿ ಬೈಬಲ್
## ಅರ್ಪಿಸುವ

ಫರೋಹನನೆ

ಹೋಗಿಬರುವೆವು!



ಬರಹಗಾರರು: Edward Hughes
ಚಿತ್ರಲೇಖಕರು: Janie Forest; Alastair Paterson
ಅಳವಡಿಸುವವರು: Lyn Doerksen
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2022 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಫರೋಹನ

ಕೋಪಗೊಂಡನು! ಐಗುಪ್ತರಲ್ಲಿ ಗುಲಾಮರಾಗಿದ್ದ ಇಸ್ರಾಯೆಲ್ಯರನ್ನು ಬಿಡಿಸಲು ದೇವರು ಮೋಶೆ ಮುಖಾಂತರವಾಗಿ ಆಜ್ಞಾಪಿಸಿದ ಮಾತನ್ನು ನೀರಾಕರಿಸಿದನು. "ಇನ್ನೂ ಹೆಚ್ಚಾಗಿ ಕೇಲಸ ಮಾಡಿಸಿಕೊಳ್ಳಿ" ಫರೋಹನು ಗುಲಾಮದ ಅಧಿಕಾರಿಗಳಿಗೆ ಆಜ್ಞಾಪಿಸಿದನು. ಈಗ ಇಸ್ರಾಯೆಲ್ಯರಿಗೆ ಪರಿಸ್ಥಿತಿ ಮೊದಲಿಗಿಂದ ಬಿಗಡಾಯಿಸಿತು.

ನಿಮಗೆ ಹುಲ್ಲನ್ನು ಕೊಡುವುದಿಲ್ಲ, ನೀವೇ ಎಲ್ಲಿಂದಾದರು ತಂದುಕೋಳ್ಳಿರಿ, ಆದರೆ ನೀವು ಮೊದಲು ಎಷ್ಟು ಇಟ್ಟಿಗೆಗಳನ್ನು ಮಾಡುತ್ತಿದ್ದಿರೋ ಅಷ್ಟೆ ಆಗಬೇಕು" ಎಂದು ಫರೋಹನು ಹೊಸ ಆಜ್ಞೆಯನ್ನು ಹೊರಡಿಸಿದನು.



ಕೇಲವು ಗುಲಾಮರಿಗೆ
ಸಮಯವಿಲ್ಲದ ಕಾರಣ ಮತ್ತು
ಮಾಡಲೆಬೇಕಾದಷ್ಟು ಇಟ್ಟಿಗಗಳನ್ನು ಒದಗಿಸದ
ಕಾರಣ ಬಿಟ್ಟಿ ಕೆಲಸ ಮಾಡಿಸಿಕೊಳ್ಳುವ
ಅಧಿಕಾರಿಗಳು ಹೊಡೆದರು.





ತಮಗೆ ಹೇಚ್ಚಾಗಿ ಬಂದ
ಕಷ್ಟ ತೊಂದರಿಗಳಿಗೆ ಮೋಶೆ
ಆರೋನರನ್ನು ಜನರು
ನಿಂಧಿಸತೊಡಗಿದರು.
ಮೋಶೆ ಒಂದು ಸ್ಥಳಕ್ಕೆ
ಹೋಗಿ ಪ್ರಾರ್ಥಿಸಿ "ಓ
ದೇವರೆ ನೀನು ಜನರನ್ನು
ಬಿಡಿಸಲೆ ಇಲ್ಲ" ಎಂದು

ಅತ್ತನು ಆಗ ದೇವರು
"ನಾನೇ ಕರ್ತನು, ನಾನೇ
ನಿಮ್ಮೆಲ್ಲರನ್ನು ಹೊರಗೆ
ತರುತ್ತೆನೆ" ಎಂದು
ಹೇಳಿದನು.

ಆಗ ದೇವರು ಮೋಶೆ
ಆರೋನರನ್ನು ಮತ್ತೆ
ಫರೋಹನ ಬಳಿಗೆ
ಕಳುಹಿಸಿದನು, ಫರೋಹನು
ದೇವರ ಸೇವಕರಿಂದ ಒಂದು
ಮಹತ್ಕಾರ್ಯವನ್ನು ತೋರಿಸು
ಎಂದು ಕೇಳಿದಾಗ,



ಆರೋನನ ಕೋಲು
ಹರಿದಾಡುವ
ಹಾವಾಯಿತು.



"ನನ್ನ ಮಂತ್ರಗಾರರನ್ನು ಕರೆಯಿರಿ" ಎಂದು ಫರೋಹನು ಘರ್ಜಿಸಿದನು. ಯಾವಾಗ ಐಗುಪ್ತರ ಮಂತ್ರಗಾರರು ತಮ್ಮ ತಮ್ಮ ಕೋಲುಗಳ್ಳನ್ನು ಬಿಸಾಡಿದರೋ ಅವುಗಳು ಸಹ ಹರಿದಾಡುವ ಹಾವಾದವು, ಆಗ ಆರೋಹನನು ಕೋಲು ಅವುಗಳನ್ನು ನುಂಗಿ ಹಾಕಿತು. ಆದರೂ ಸಹ ಫರೋಹನನು ಜನರನ್ನು ಕಳುಹಿಸಲು ನಿರಾಕರಿಸಿದನು.

ಮರುದಿವಸ ಮೋಶೆ ಆರೋನರು ಫರೋಹನನ್ನು ನದಿಯ ಹತ್ತಿರ ಬೇಟ್ಟಿಯಾದರು. ಯಾವಾಗ ಆರೋನನು ತನ್ನ ಕೋಲನ್ನು ಚಾಚಿದನೋ ಆಗ ದೇವರು ನದಿಯ ನೀರನ್ನು ರಕ್ತವನ್ನಾಗಿ ಮಾರ್ಪಡಿಸಿದನು. ಮೀನಗಳು ಸತ್ತವು ಜನರು ಆ ನೀರನ್ನು ಕುಡಿಯಲಾಗಲಿಲ್ಲ.



ಫರೋಹನ ಹೃದಯ ಕಠಿಣವಾದ್ದರಿಂದ ಆತನು
ಇಸ್ರಾಯೆಲ್ಯರನ್ನು ಐಗುಪ್ತದಿಂದ ಬಿಡಗೊಳಿಸಲಿಲ್ಲ.





ಆಗ ಮತ್ತೆ ಮೋಶೆ ಫರೋಹನಿಗೆ ದೇವರ ಮಕ್ಕಳನ್ನು ಹೋಗಲು ಬಿಡು ಎಂದು ಕೇಳಿಕೊಂಡನು. ಫರೋಹನು ನೀರಾಕರಿಸಿದನು. ದೇವರು ಇನ್ನೊಂದು ವ್ಯಾದಿಯನ್ನು ಬರಮಾಡಿದನು. ಇಡೀ ಐಗುಪ್ತವು ಕಪ್ಪೆಗಳಿಂದ ತುಂಬಿಹೋಗಿತ್ತು. ಅವು ಮನೆಗಳಲ್ಲಿ, ಕೋಣೆಗಳಲ್ಲಿ ಮಾತ್ರವಲ್ಲದೆ ಅಡುಗೆ ಮಾಡುವ ಪಾತ್ರೆಗಳಲ್ಲಿಯೂ.



"ದೇವರು ಈ ಕಪ್ಪೆಗಳಿಂದ
ನಮ್ಮೆಲ್ಲರನ್ನು ಬಿಡಿಸುವಂತೆ
ಪ್ರಾರ್ಥಿಸು" ಎಂದು
ಫರೋಹನು ಮೊರೆಯಿಟ್ಟು!
ನಾನು ನೀಮ್ಮ ಜನರನ್ನು
ಹೋಗಗೊಡಿಸುವೆನು
ಎಂದು ಹೇಳಿದನು,
ಆದರೆ ಕಪ್ಪೆಗಳು ಹೋದ
ನಂತರ ತನ್ನ ಮನಸ್ಸನ್ನು
ಬದಲಾಯಿಸಿ,
ಗುಲಾಮರನ್ನು
ಹೋಗಗೋಳಿಸಲಿಲ್ಲ.

ನಂತರ ದೇವರು ಕೋಟ್ಯಂತರ ಚಿಕ್ಕದಾದ ಹೇನುಗಳನ್ನು ಬರಮಾಡಿದನು. ಅದರ ಕಡಿತದಿಂದ ಪ್ರತಿ ಮನುಷ್ಯನು ಮತ್ತು ಪ್ರಾಣಿಗಳಿಗೆ ಕೆರೆತ ಉಂಟಾಯಿತು. ಆದರೂ ಸಹ ಫರೋಹನು ದೇವರಗೆ ಬಿಟ್ಟುಕೊಡಲಿಲ್ಲ.







ನಂತರ ದೇವರು ಹುಳಗಳನ್ನು, ಐಗುಪ್ತರ ಜಾನುವಾರವನ್ನು ಕೋಲ್ಲಲು ಘೋರವಾದ ವ್ಯಾದಿಗಳನ್ನು ಬರಮಾಡಿದನು. ನೋವಾಗುವ ಹುಣ್ಣುಗಳನ್ನು ಬರಮಾಡಿದಾಗ ಜನರು ಬಾರಿ ನೋವನ್ನು ಅನುಭವಿಸಿದರು ಆದರೂ ಸಹ ಫರೋಹನು ದೇವರನ್ನು ಎದುರಿಸಿದನು.



ಹುಣ್ಣುಗಳ ವ್ಯಾದಿಯ ನಂತರ, ದೇವರು ಮೀಡತೆಗಳಿಂದ ಬಾದಿಸಿದನು. ಈ ಮೀಡತೆಗಳು ಭೂಮಿಯ ಮೇಲಿನ ಎಲ್ಲಾ ಹಸಿರು ಸಸ್ಯಗಳನ್ನು ತಿಂದು ಹಾಕಿದವು.



ನಂತರ ದೇವರು ಮೂರ
ದಿನಗಳ ಕಾಲ ಕಾರ್ಗತ್ತಲ್ಲನ್ನು
ಬರಮಾಡಿದನು ಕಠಿಣ
ಹೃದಯಿಯಾದ ಫರೋಹನು
ಇಸ್ರಾಯೆಲ್ಯರನ್ನು
ಬಿಡುಗಡೆಗೊಳಿಸಲಿಲ್ಲ.

"ನಾನು ಇನ್ನೊಂದು ಬಾದೆಯನ್ನು ಕಳುಹಿಸಿವೆನು'

ಎಂದು ಎಚ್ಚರಿಕೆ ಕೊಟ್ಟನು. ಮಧ್ಯರಾತ್ರಿಯಲ್ಲಿ ಚೋಚ್ಚಲ ಮಗನು ಮೊದಲುಗೊಂಡು ಚೋಚ್ಚಲದ ಪ್ರಾಣಿಗಳು ಸಹ ಸಾಯುವವು ಎಂದು ಹೇಳಿದನು. ಇಸ್ರಾಯೆಲ್ಯರು ತಮ್ಮ ಮನೆಯ ಬಾಗಿಲಿನ ನೀಲುವುಕಂಬಗಳಿಗೆ ಕುರಿಯ ರಕ್ತವನ್ನು ಹಚ್ಚುವುದಾದರೆ ಅವರ ಚೊಚ್ಚಲ ಮಕ್ಕಳು ರಕ್ಷಿಸಲ್ಪಡುವರು ಎಂದು ಹೇಳಿದನು.





ಮದ್ಯರಾತ್ರಿ ಐಗುಪ್ತದಲ್ಲಿ ದೊಡ್ಡ
ಅಳುವು ಕೇಳತೋಡಗಿತು. ಸಾವು
ಆವರಿಸಿಕೊಂಡಿತ್ತು. ಒಂದು
ಮನೆಯಿಂದ ಒಬ್ಬ
ವ್ಯಕ್ತಿಯಾದರೂ ಸತ್ತಿದ್ದನು.





"ಹೋಗು ನೀನ್ನ ದೇವರನ್ನು
ಆರಾಧಿಸಿಕೊ" ಎಂದು ಫರೋಹನು
ಮೋಶೆಗೆ ಮೋರೆಯಿಡಲು, ಅತಿ
ಬೇಗನೆ ದೇವರ ಜನರು ಐಗುಪ್ತದ
ಗಡಿಯನ್ನು ದಾಡಿದ್ದರು.



ದೇವರು ಮೋಶೆಗೆ ಪಸ್ಕಹಬ್ಬದ
ರಾತ್ರಿಯನ್ನು ನೆನಪಿಸಿಕೊಳ್ಳಲು ಹೇಳಿದನು
ಏಕೆಂದರೆ ದೇವದೂತನು ಇಸ್ರಾಯೆಲ್ಯರ ಮನೆಗಳ
ಮೇಲೆ ಹಾದು ಹೋಗಿ, ಫರೋಹನನ
ಮನೆಯನ್ನು ಸಾವಿನಿಂದ ಹೊಡೆದಿದ್ದನು.



430 ವರ್ಷಗಳನ್ನು ಐಗುಪ್ತದಲ್ಲಿ ಕಳೆದ ನಂತರ,
ಈಗ ಸ್ವತಂತ್ರರಾದರು. ದೇವರು ಹಗಲಲ್ಲಿ ಮೇಘಸ್ತಂಭವಾಗಿಯೂ,
ರಾತ್ರಿಯಲ್ಲಿ ಅಗ್ನಿ ಸ್ತಂಭವಾಗಿಯೂ ಅವರ ಮುಂದೆ ಹೋದನು.



ಫರೋಹನು ಇಸ್ರಾಯೇಲ್ಯರೊಂದಿಗೆ
ಇನ್ನೂ ಎಲ್ಲವನ್ನು ಮುಗಿಸಿರಲಿಲ್ಲ
ಮತ್ತೆ ಆತನು ದೇವರನ್ನು
ಮರೆತು ತನ್ನ ಮನಸ್ಸನ್ನು
ಬದಲಾಯಿಸಿಕೊಂಡನು. ತನ್ನ
ಸೈನ್ಯವನ್ನು ಕರೆದುಕೊಂಡು,
ಗುಲಾಮರ ಅಟ್ಟಿಸಿಕೊಂಡು
ಹೊಗಲು ಶಿಫ್ರದಲ್ಲಿ ಇಸ್ರಾಯೆಲ್ಯರನ್ನು
ಬಂಡೆಗಳ ಮತ್ತು ಸಮುದ್ರದ
ಮದ್ಯದಲ್ಲಿ ಸಿಕ್ಕಿ ಹಾಕಿಸಿದನು.



"ಕರ್ತನೆ ನಿಮಗೋಸ್ಕರ ಯುದ್ದಮಾಡುವನು ಎಂದು ಮೋಶೆ ಹೇಳಿ ನೀರಿನ ಅಂಚಿಗೆ ಬಂದು ತನ್ನ ಕೈಯನ್ನು ಮೆಲಕ್ಕೆತ್ತಿದನು.



ಒಂದು ದೊಡ್ಡ
ಅದ್ಭುತ ನಡೆಯಿತು,
ದೇವರು ಸಮುದ್ರದ
ನೀರಿನ ಮೂಲಕ ಒಂದು
ಮಾರ್ಗವನ್ನು ಮಾಡಿದನು,
ಜನರು ಸುರಕ್ಷಿತವಾಗಿ
ದಾಟಿದರು.

ನಂತರ ಫರೋಹನನ ಸೈನ್ಯವು ಕೆಂಪು ಸಮುದ್ರದ ಒಳಗೆ ವೇಗವಾಗಿ ಚಲಿಸಲು "ನಾವು ಇವರನ್ನು ಹಿಡಿಯುತ್ತೆವೆ" ಎಂದು ಸೈನಿಕರು ಬಾವಿಸಿದರು. ಆದರೆ ದೇವರು ನೀರನ್ನು ಮುಚ್ಚಲಾಗಿ ಐಗುಪ್ತದ ಪ್ರಬಲವಾದ ಸೈನ್ಯವು ನೀರಿನಲ್ಲಿ ನುಂಗಿಹಾಕಲ್ಪಟ್ಟಿತು. ಈಗ ಫರೋಹನಿಗೆ ಅರ್ಥವಾಯಿತು ಇಸ್ರಾಯೆಲ್ಯರ ದೇವರು ಎಲ್ಲರ ಮೇಲೆ ಒಡೆಯನು ಎಂಬುದಾಗಿ.



# ಫರೋಹನನೆ ಹೋಗಿಬರುವೆವು!

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ವಿಮೋಚನ 4–15**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

# ಮುಕ್ತಾಯ

11

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16